**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**ಸಿ.ಸಿ. ಸಂಖ್ಯೆ: 726 /2023**

**ಸಾಕ್ಷಿಯನ್ನು ದಿಃ 03.09.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ. MRH ವಕೀಲರಿಂದಃ**

ನಾನು ನೋಟೀಸ್ ನೀಡಲು ವಕೀಲರಿಗೆ ಮಾಹಿತಿ ನೀಡುವಾಗ ನಾನು ಏನು ವ್ಯವಹಾರ ಮಾಡುತ್ತಿದ್ದೆ ಎಂದು ಮಾಹಿತಿ ನೀಡಿಲ್ಲ. ಆರೋಪಿ ಏನು ಕೆಲಸ ಮಾಡುತ್ತಾರೆ ಎಂಬ ವಿಷಯ ನನಗೆ ಗೊತ್ತು. ಅದನ್ನು ನನ್ನ ವಕೀಲರಿಗೆ ಹೇಳಿಲ್ಲ. ಯಾವ ತಾರೀಖು, ತಿಂಗಳು ಮತ್ತು ಇಸವಿಯಂದು ರೂ.4 ಲಕ್ಷ ಸಾಲ ಕೊಟ್ಟಿದ್ದೇನೆ ಎಂದು ವಕೀಲರಿಗೆ ಮಾಹಿತಿ ನೀಡಿಲ್ಲ. ದಿಃ 30.06.2023 ರಂದು ಚೆಕ್ ನೀಡಿದ್ದಾರೆ ಎಂದು ನಾನು ವಕೀಲರಿಗೆ ಹೇಳಿದ್ದೇನೆ. ದಿಃ 30.06.2023 ರಂದು ಆರೋಪಿ ನನಗೆ ಚೆಕ್ ನೀಡಿದ್ದಾರೆ ಎಂಬುದನ್ನು ನೋಡಿದವರು ಇದ್ದಾರೆ. ಅವರ ಹೆಸರು ಬಿ.ರಾಜಣ್ಣ ಬಿನ್ ಕಾಡುಬಸಪ್ಪ, 78 ವರ್ಷ, ಕಲ್ಲಹಳ್ಳಿ ವಾಸಿ. ಅವರು ನಿವೃತ್ತ work inspector. ಅವರು ಬದುಕಿದ್ದಾರೆ. ಅವರು ಹಾಜರಿದ್ದರು ಎಂದು ವಕೀಲರಿಗೆ ಮಾಹಿತಿ ಕೊಟ್ಟಿದ್ದೇನೆ. ಆರೋಪಿ ಚೆಕ್ ಕೊಟ್ಟಿದ್ದಾರೆ ಎಂದು ನೀವು ಹೇಳಿದ್ದು ಅದನ್ನು ಎಲ್ಲಿ ಕೊಟ್ಟಿದ್ದಾರೆ ಎಂದರೆ ನನ್ನ ಮನೆಗೆ ಬಂದು ಕೊಟ್ಟಿದ್ದಾರೆ. ದಿಃ 30.06.2023 ರಂದು ಸಂಜೆ 4-30 ರಿಂದ 5-00 ಗಂಟೆಯಲ್ಲಿ ಚೆಕ್ ಕೊಟ್ಟಿದ್ದಾರೆ. ನನ್ನ ಮನೆಯಲ್ಲಿ ನಾನು, ನನ್ನ ಪತ್ನಿ ಮತ್ತು ಮಗ ವಾಸವಿದ್ದೇವೆ. ನಾನು ಆರೋಪಿಗೆ ರೂ. 4 ಲಕ್ಷ ಕೊಟ್ಟಿದ್ದೇನೆ ಎಂಬುದನ್ನು ಮೇಲೆ ಹೇಳಿದ ಬಿ.ರಾಜಣ್ಣ ಮತ್ತು ನನ್ನ ಪತ್ನಿ ನೋಡಿದ್ದಾರೆ. ನನ್ನ ಪತ್ನಿಯ ಹೆಸರು ಆರ್.ಗೀತಾ ಅವರು ನನ್ನ ಜೊತೆ ಈ ಕೇಸಿನಲ್ಲಿ ನೀಡಿದ ವಿಳಾಸದಲ್ಲಿಯೇ ವಾಸವಿದ್ದಾರೆ. ನೀವು ಹಣ ಕೊಟ್ಟಿದ್ದೀರಿ ಎಂದು ಹೇಳಿದ್ದು, ಆ ಸಮಯದಲ್ಲಿ ನಿಮ್ಮ ಪತ್ನಿ ಮತ್ತು ಬಿ.ರಾಜಣ್ಣ ಹಾಜರಿದ್ದರು ಎಂದು ವಕೀಲರಿಗೆ ಹೇಳಿದ್ದಿರಾ ಎಂದರೆ ಹೇಳಿದ್ದೆ. ನಾನು ಹಣ ಕೊಟ್ಟಿದ್ದೇನೆ ಎಂದು ಹೇಳುವ ದಿನಾಂಕಕ್ಕೂ ಮತ್ತು ಆರೋಪಿ ಚೆಕ್ ನೀಡಿದ್ದಾರೆ ಎನ್ನುವ ದಿನಾಂಕಕ್ಕು ಎಷ್ಟು ಅಂತರ ಇದೆ ಎಂದರೆ ಚೆಕ್ ತೆಗೆದುಕೊಂಡು ಹಣ ಕೊಟ್ಟಿದ್ದೇನೆ. ಈ ವಿಷಯವನ್ನು ನಿಮ್ಮ ವಕೀಲರಿಗೆ ಹೇಳಿದ್ದಿರಾ ಎಂದರೆ ನೋಟಿಸ್ ಕೊಡುವಾಗ ಹೇಳಿದ್ದೆ. ರೂ. 4 ಲಕ್ಷ ನನ್ನ ಬಳಿ ಇತ್ತು ಎಂದು

ತೋರಿಸಲು ದಾಖಲೆ ಇದೆ. ಏನು ದಾಖಲೆ ಎಂದರೆ ಹುಣಸೂರಿನ ಕರ್ನಾಟಕ ಬ್ಯಾಂಕಿನಲ್ಲಿರುವ ನನ್ನ ಖಾತೆಯ ಪಾಸ್ ಪುಸ್ತಕ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನೀವು ಕೊಟ್ಟಿದ್ದಿರಿ ಎನ್ನುವ ಹಣವನ್ನು ಯಾವ ರುಪಾದಲ್ಲಿ ಕೊಟ್ಟಿದ್ದೀರಿ ಎಂದರೆ ನಗದಿನಲ್ಲಿ ಕೊಟ್ಟಿದ್ದೇನೆ. ನಾನು ಹಣ ಕೊಟ್ಟ ದಿನವೇ ಸದರಿ ಹಣವನ್ನು ಬ್ಯಾಂಕ್ ನಿಂದ ಡ್ರಾ ಮಾಡಿದ್ದೆ. ನಾನು self cheque ಮೂಲಕ ಹಣ ಡ್ರಾ ಮಾಡಿದ್ದೆ. ದಿಃ 30.06.2023 ರಂದು ಹಣ ಡ್ರಾ ಮಾಡಿದ್ದೆ. ಆ ಬಗ್ಗೆ ಪಾಸ್ ಪುಸ್ತಕದಲ್ಲಿ ನಮೂದು ಇದೆ.

ಆರೋಪಿ ನಿಮಗೆ ಹೇಗೆ ಪರಿಚಯ ಎಂದರೆ ಅವರ ತಾಯಿ ಮೂಲಕ ಪರಿಚಯ. ಆರೋಪಿಯ ತಾಯಿಯ ಹೆಸರು ಮಹದೇವಮ್ಮ. ಆರೋಪಿಯ ತಾಯಿಯ ಮೇಲೆ ಈ ನ್ಯಾಯಾಲಯದಲ್ಲಿ ರೂ. 3 ಲಕ್ಷದ ಬಗ್ಗೆ ಚೆಕ್ ಪ್ರಕರಣ ದಾಖಲಿಸಿದ್ದೇನೆ. ನಾನು ಮೊದಲು ಮಹದೇವಮ್ಮ ರವರ ವಿರುದ್ದ ಪ್ರಕರಣ ದಾಖಲಿಸಿದ್ದೇನೆ. ಆರೋಪಿಯ ತಾಯಿಗೆ ಹಣ ಕೊಟ್ಟಿದ್ದೇನೆ ಎನ್ನುವ ದಿನಾಂಕಕ್ಕೂ ಆರೋಪಿಗೆ ಹಣ ಕೊಟ್ಟಿದ್ದೇನೆ ಎನ್ನುವ ದಿನಾಂಕಕ್ಕೂ ಎಷ್ಟು ಅಂತರ ಇತ್ತು ಎಂದರೆ ಸುಮಾರು 10-11 ದಿನ ಇತ್ತು. ಮಹದೇವಮ್ಮ ರವರಿಗೆ ಕೊಟ್ಟಿದ್ದೀರಿ ಎನ್ನುವ ರೂ.3 ಲಕ್ಷ ನಿಮ್ಮ ಬಳಿ ಇತ್ತು ಎಂದು ತೋರಿಸಲು ದಾಖಲೆ ಇದೆಯೇ ಎಂದರೆ ಇದೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಾನು ಆರೋಪಿ ಮತ್ತು ಆಕೆಯ ತಾಯಿಯ ವಿರುದ್ಧ ಪ್ರಕರಣ ದಾಖಲಿಸುವ ಕಾಲಕ್ಕೆ ಈ ನ್ಯಾಯಾಲಯದಲ್ಲಿ ಅವರ ವಿರುದ್ಧ ಸಾಕಷ್ಟು ಪ್ರಕರಣಗಳು ದಾಖಲಾಗಿತ್ತು ಎಂದರೆ ಗೊತ್ತಿಲ್ಲ. ಆರೋಪಿ ನಿಮ್ಮಿಂದ ತೆಗೆದುಕೊಂಡಿದ್ದಾರೆ ಎನ್ನುವ ಹಣವನ್ನು ಯಾವ ಉದ್ದೇಶಕ್ಕಾಗಿ ತೆಗೆದುಕೊಂಡಿದ್ದಾರೆ ಎಂದರೆ ಬ್ಯೂಟಿ ಪಾರ್ಲರ್ ನಡೆಸಬೇಕೆಂದು ತೆಗೆದುಕೊಂಡಿದ್ದಾರೆ. ಈ ವಿಷಯವನ್ನು ಪ್ರಕರಣ ದಾಖಲಿಸುವಾಗ ವಕೀಲರಿಗೆ ಹೇಳಿದ್ದೇನೆ.

ನಾನು ಆರೋಪಿಯ ಒಂದೇ ವಿಳಾಸಕ್ಕೆ ನೋಟಿಸ್ ಜಾರಿ ಮಾಡಿದ್ದೇನೆ. ನೋಟೀಸ್ ಏನಾಯಿತು ಎಂದರೆ ಆರೋಪಿಗೆ ಜಾರಿಯಾಗಿದೆ. ನೋಟೀಸ್‌ನ್ನು ತಿರಸ್ಕಾರ ಮಾಡಿದ್ದಾರೆಯೇ ಎಂದರೆ ಇಲ್ಲ. ನೋಟಿಸನ್ನು ತಿರಸ್ಕಾರ ಮಾಡಿದ್ದಾರೆ ಎಂದು ನಾನು ವಕೀಲರಿಗೆ ಮಾಹಿತಿ ಕೊಟ್ಟಿಲ್ಲ. ನನ್ನ ಮತ್ತು ಆರೋಪಿಯ ಮಧ್ಯೆ ಸಾಲದ ವ್ಯವಹಾರ ಎಂದು ತೋರಿಸಲು ದಾಖಲೆ ಇಲ್ಲ. ಸಾಲ ಎಂದು ತೋರಿಸಲು ನಿಮ್ಮ ಮತ್ತು ಆರೋಪಿಯ ಮಧ್ಯೆ ಬಡ್ಡಿ ಮಾತುಕತೆ ಆಗಿತ್ತೆ ಎಂದರೆ ಇಲ್ಲ. ನನ್ನ ನೋಟಿಸ್ ಮತ್ತು ದೂರಿನಲ್ಲಿ

ಆರೋಪಿಯೊಂದಿಗೆ ಮಾಡಿದ್ದೇನೆ ಎನ್ನುವ ವ್ಯವಹಾರ ಸಾಲ ಎಂದು ಹೇಳಿಲ್ಲ. ನನ್ನ ಪತ್ನಿ ಮತ್ತು ಬಿ.ರಾಜಣ್ಣ ರವರು ಈ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.